## <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಹುಣಸೂರು.</u>

## ಸಿ.ಸಿ. ಸಂಖ್ಯೆ: 620/2014

**ಸಾಕ್ಷಿಯನ್ನು ದಿಃ 04.12.2023 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | |
|---|---|---|
| ಹೆಸರು | ಲವ .ಎಮ್.ಆರ್ | ಸಿ.ಡಬ್ಲ್ಯೂ: **42** ಪಿ.ಡಬ್ಲ್ಯೂ: **21** |
| ತಂದೆಯ ಹೆಸರು | ಲೇಟ್ ರಾಮೇಗೌಡ | |
| ವಯಸ್ಸು | **41** ವರ್ಷ | |
| ಕೆಲಸ | ಪಿ.ಐ, ವಿ.ವಿ.ಪುರಂ ಟ್ರಾಫಿಕ್ ಪೊಲೀಸ್ ಠಾಣೆ, ಮೈಸೂರು | |
| ವಾಸಸ್ಥಳ | ಮೈಸೂರು | |

<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>

1. ನಾನು ದಿಃ 06.09.2013 ರಿಂದ ದಿಃ 04.12.2015 ರವರೆಗೆ ನಾನು ಹುಣಸೂರು ಪಟ್ಟಣ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 07.09.2013 ರಂದು ಕಡತವನ್ನು ಚಾಸಾ-41 ರವರಿಂದ ಪಡೆದಿರುತ್ತೇನೆ. ತನಿಖೆ ಮುಂದುವರಿಸಿ, ದಿಃ 10.10.2013 ರಂದು ಚಾಸಾ-1 ರವರು ಠಾಣೆಗೆ ಹಾಜರಾಗಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಚಾಸಾ-5 ರವರ ಚೆಕ್ ಹಾಗೂ 6 ಪುಟಗಳ ಸ್ಟೇಟ್ ಮೆಂಟ್ ಆಫ್ ಅಕೌಂಟ್ ಅನ್ನು ಹಾಜರುಪಡಿಸಿದ ಮೇರೆಗೆ ಅವುಗಳನ್ನು ಚಾಸಾ-34,35 ರವರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಚೆಕ್ ಹಾಗೂ ಸ್ಟೇಟ್ ಮೆಂಟ್ ಆಫ್ ಅಕೌಂಟ್ ಅನ್ನು PF 179/13 ರಲ್ಲಿ ಅಳವಡಿಸಿ, ಮಾನ್ಯ ನ್ಯಾಯಾಲಯದ ಆದೇಶಕ್ಕಾಗಿ ರವಾನಿಸಿರುತ್ತೇನೆ. ಸದರಿ ಪಂಚನಾಮೆ ನಿಪಿ.110 ರಲ್ಲಿ, ಸಾಕ್ಷಿಯ ಸಹಿಯನ್ನು ನಿಪಿ.110(ಬಿ) ಎಂದು ಗುರುತಿಸಲಾಯಿತು. ಸದರಿ ಚೆಕ್ ಹಾಗೂ ಸ್ಟೇಟ್ ಮೆಂಟ್ ಆಫ್ ಅಕೌಂಟ್ ಅನ್ನು ಶೀಲು ಮಾಡಿದ ಲಕೋಟೆಯಲ್ಲಿ ಕಡತದಲ್ಲಿ ಲಭ್ಯವಿದ್ದು ಸದರಿ ಲಕೋಟೆಯನ್ನು ಮುಕ್ತ ನ್ಯಾಯಾಲಯದಲ್ಲಿ ತೆರೆದು ನೋಡಲಾಗಿದ್ದು, ಚೆಕ್ ನಂಬರ್ 738482 ನಿಪಿ. 111 ಎಂದು, ಸಾಕ್ಷಿಯ ಸಹಿಯನ್ನು ನಿಪಿ.111(ಎ) ಎಂದು ಗುರುತಿಸಲಾಯಿತು.

2. ದಿಃ 01.08.2010 ರಿಂದ ದಿಃ 31.10.2010 ರವರೆಗಿನ ಕರ್ನಾಟಕ ಬ್ಯಾಂಕ್ ಲಿ. ದಾರಪ್ಪ ವೆಂಕಪ್ಪ ಉಪ್ಪಾರ್ ಅವರ ಸ್ಟೇಟ್ ಮೆಂಟ್ ಆಫ್ ಅಕೌಂಟ್ ಅನ್ನು ನಿಪಿ.112 ಎಂದು ಸಾಕ್ಷಿಯ ಸಹಿಯನ್ನು ನಿಪಿ.112(ಎ) ಎಂದು ಗುರುತಿಸಲಾಯಿತು.

3. ದಿಃ 30.12.2013 ರಂದು ಚಾಸಾ-30 ರವರಿಂದ ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕೈಬರವಣಿಗೆ ತಜ್ಞರ ವರದಿ ಪಡೆದಿರುತ್ತೇನೆ. ಸದರಿ ವರದಿಯನ್ನು ನಿಪಿ.113 ಎಂದು, ಸಾಕ್ಷಿಯ ಸಹಿಯನ್ನು ನಿಪಿ.113(ಎ) ಎಂದು ಗುರುತಿಸಲಾಯಿತು. ಗುರುತಿಸಲಾಯಿತು.

4. ದಿಃ 31.12.2013 ರಂದು ಎಸ್ ಬಿ ಎಮ್ ಹುಣಸೂರು ಶಾಖೆಗೆ ಭೇಟಿ ನೀಡಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮೂಲ ಡಿ.ಡಿ. ಸಂಖ್ಯೆ 137413 ಅನ್ನು ಚಾಸಾ-36 ರವರು ಹಾಜರುಪಡಿಸಿದ್ದು, ಚಾಸಾ-36, 42 ರವರ ಸಮಕ್ಷಮ ಪಂಚನಾಮೆ ಮೂಲಕ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಅಮಾನತ್ತು ಮಹಜರ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.114 ಎಂದು ಸಾಕ್ಷಿಯ ಸಹಿಯನ್ನು ನಿಪಿ.114(ಎ) ಎಂದು ಗುರುತಿಸಲಾಯಿತು. ಸದರಿ ಮೂಲ ಡಿ.ಡಿ.ಯನ್ನು PF no. 319/13 ರಲ್ಲಿ ಅಳವಡಿಸಿ, ಮಾನ್ಯ ನ್ಯಾಯಾಲಯದ ಆದೇಶಕ್ಕಾಗಿ ರವಾನಿಸಿರುತ್ತೇನೆ.

5. ನ್ಯಾಯಾಲಯದ ಕಡತದಲ್ಲಿರುವ ಡಿ.ಡಿ. ಶೀಲ್ಡ್ ಕವರ್ ಅನ್ನು ಮುಕ್ತ ನ್ಯಾಯಾಲಯದಲ್ಲಿ ತೆರೆದು ನೋಡಲಾಗಿದ್ದು, ಅದರಲ್ಲಿರುವ ಡಿ.ಡಿ.137413 ದ 57,646 ರೂ. ದಿಃ 29.12.2010 ರ ಡಿ.ಡಿ. ಮೂಲಪ್ರತಿಯನ್ನು ಅನ್ನು ನಿಪಿ.115 ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-36 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 18.01.2014 ರಂದು ಚಾಸಾ-1 ರವರ ಮುಂದುವರಿದ ಹೇಳಿಕೆ ಪಡೆದಿರುತ್ತೇನೆ. 13.02.2014 ರಂದು ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿಯ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೇನೆ. ಆರೋಪಿ ನೋಡಿದರೆ ಗುರುತಿಸುತ್ತೇನೆ.

**ಪಾಟೀಸವಾಲುಃ ಆರೋಪಿ ಗೈರುಹಾಜರಿದ್ದು, ಆರೋಪಿ ಪರ ವಕೀಲರನ್ನು ಕೂಗಿಕರೆಯಿಸಲಾಗಿ, ಗೈರುಹಾಜರಿದ್ದು ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.